

**ಸದೃಢವಾಗಿ ಬೆಳೆಯಲು, ತಳಿ ವೈವಿಧ್ಯವನ್ನು ಕಾಪಾಡಿಕೊಳ್ಳಲು, ವಂಶಾಭಿವೃದ್ಧಿ ಕ್ರಿಯೆಯಲ್ಲಿ ಪಾಲ್ಗೊಳ್ಳಲು ಈ 'ಎಲಿಫೆಂಟ್ ಕಾರಿಡಾರ್'ಗಳ ಪಾತ್ರ ಬಹುಮುಖ್ಯ.**

## ಗೃಹ ವಲಯ

ಆನೆಗಳು ಕೂಡ ಸಂಘಜೀವಿಗಳು. ಒಂದೊಂದು ಗುಂಪಿನಲ್ಲೂ 60ರಿಂದ 90 ಆನೆಗಳು ಇರುತ್ತವೆ. ಹಿರಿಯ ಹೆಣ್ಣಾನೆಯೇ ಗುಂಪಿನ ಅಧಿನಾಯಕಿ. ಆಕೆಯ ಸೋದರಿಯರು, ಎಲ್ಲರ ಮಕ್ಕಳು ಆ ಕೂಡು ಕುಟುಂಬದ ಸದಸ್ಯರು. ಒಂದು ವಂಶವೃಕ್ಷದ ಸದಸ್ಯರೆಲ್ಲ ಒಟ್ಟಾಗಿ ಬಾಳುವುದು, ವಂಶದ ಪರಂಪರೆಯನ್ನು ಕಾಯ್ದುಕೊಳ್ಳುವುದು ಈ ಆನೆ ಸಂಕುಲದ ವೈಶಿಷ್ಟ್ಯ. ಒಂದು ವಂಶದ ಆನೆಯನ್ನು ಮತ್ತೊಂದು ವಂಶದ ಗುಂಪು ಹತ್ತಿರಕ್ಕೂ ಸೇರಿಸಿಕೊಳ್ಳುವುದಿಲ್ಲ, ಗೊತ್ತೆ? ವಂಶದ ಪರಿಶುದ್ಧತೆಯನ್ನು ಅವುಗಳು ತುಂಬಾ ಕಟ್ಟುನಿಟ್ಟಾಗಿ ಕಾಪಾಡಿಕೊಳ್ಳುತ್ತವೆ.

ಒಂದೊಂದು ವಂಶಕ್ಕೂ ಸುಮಾರು 600 ಚದರ ಕಿ.ಮೀ.ಯಷ್ಟು ವಿಶಾಲ ಪ್ರದೇಶದ ಆವಾಸಸ್ಥಾನ ಇರುತ್ತದೆ. ಹೌದು, ಅದೇ ಆ ವಂಶದ 'ಗೃಹ ವಲಯ'. ಆಹಾರಕ್ಕಾಗಿ ನಿತ್ಯ ಹತ್ತಾರು ಕಿ.ಮೀ. ದೂರದವರೆಗೆ ಈ ಗುಂಪು ಅಲೆದಾಡುತ್ತದೆ. ಮರಿಗಳ ಲಾಲನೆ, ಪಾಲನೆ ಮಾಡುವುದು ಗುಂಪಿನಲ್ಲಿರುವ ಚಿಕ್ಕಮ್ಮ ಆನೆಯ ಕೆಲಸ. ಎಲ್ಲಿ ಆಹಾರ ಸಿಗುತ್ತದೆ, ಜಲಮೂಲಗಳು ಎಲ್ಲೆಲ್ಲಿವೆ, ಅಪಾಯದ ಸನ್ನಿವೇಶದಲ್ಲಿ ಎಲ್ಲಿ ಬಿಡಾರ ಹೂಡಬೇಕು, ದಾರಿ ತಪ್ಪಿದಾಗ ತಂಡವನ್ನು ಪುನಃ ಕೂಡಿಕೊಳ್ಳುವುದು ಹೇಗೆ... ಮೊದಲಾದ ಸಂಗತಿಗಳ ಕುರಿತು ಈ ಮರಿಯಾನೆಗಳಿಗೆ ನಿತ್ಯಪಾಠ.

ಗಂಡಾನೆ ಮರಿಗಳಲ್ಲಿ ತರಲೆ ಸ್ವಭಾವ ಜಾಸ್ತಿ. ಗುಂಪಿನಲ್ಲಿದ್ದಾಗ ಅವುಗಳು ಮಾತೃಪ್ರಧಾನ ವ್ಯವಸ್ಥೆಯ ಕಟ್ಟುಪಾಡುಗಳನ್ನು ಪಾಲಿಸುವುದಿಲ್ಲ. ಉಡಾಫೆ ಮನೋಭಾವದ ಅವುಗಳು ಗುಂಪಿನಲ್ಲಿ ಕೀಟಲೆ ಮಾಡುತ್ತಲೇ ಕಾಲ ಕಳೆಯುತ್ತವೆ. 9ರಿಂದ 14 ವರ್ಷಗಳಷ್ಟು ವಯಸ್ಸಾಗುವ ವೇಳೆಗೆ ಅವುಗಳು ಗುಂಪಿನಿಂದ ಹೊರಬಿದ್ದು, ಸ್ವತಂತ್ರವಾಗಿ ಬದುಕಲು ಆರಂಭಿಸುತ್ತವೆ. ಈ ಒಂಟಿಸಲಗಗಳ ಗೃಹ ವಲಯದ ವ್ಯಾಪ್ತಿ 1,400 ಚದರ ಕಿ.ಮೀ.ಯಷ್ಟು ವಿಶಾಲ.

